# ಡಯೊನೀಸಿಯಸ್

ಜಿ.ಪಿ.ರಾಜರತ್ನಂ

**ಸೈ**ರಕ್ಯೂಸ್ ಎಂಬುದು ಗ್ರೀಸ್ ದೇಶದ ಒಂದು ನಗರ. ಕ್ರಿಸ್ತ ಪೂರ್ವ ನಾಲ್ಕನೆಯ ಶತಮಾನದಲ್ಲಿ ಡಯೊನೀಸಿಯಸ್ ಎಂಬುವವನು ಅಲ್ಲಿ ಆಳುತ್ತಿದ್ದ.

ಡಯೊನೀಸಿಯಸ್ ರಾಜನಲ್ಲ, ರಾಜನ ಮಗನಲ್ಲ. ಆದರೂ ರಾಜನ ಹಾಗೆ ಆ ನಗರದ ಪ್ರಜೆಗಳಿಗೆ ಬೇಕಾದವನಾಗಿದ್ದ. ಪ್ರಿಯನಾಗಿದ್ದ ಎಂದು ಹೇಳುವುದಕ್ಕೆ ಆಗುತ್ತಿರಲಿಲ್ಲ. ಪ್ರಜೆಗಳೆಲ್ಲ ಅವನಿಗೆ ಹೆದರುತ್ತಿದ್ದರು.

ಡಯೊನೀಸಿಯಸ್ ಆ ನಗರದ ಸಾಮಾನ್ಯ ಪ್ರಜೆಯೊಬ್ಬನ ಮಗ. ಆದರೂ ತನ್ನ ಬುದ್ಧಿಶಕ್ತಿಯಿಂದ, ಚಾತುರ್ಯ ಸಾಮರ್ಥ್ಯಗಳಿಂದ ಮಿಕ್ಕವರಿಗಿಂತ ಮೇಲೆನಿಸಿ ಅಧಿಕಾರವನ್ನು ಸಂಪಾದಿಸಿಕೊಂಡಿದ್ದ.

ಆಗಿನ ಕಾಲದಲ್ಲಿ ಗ್ರೀಸ್ ದೇಶದ ಯಾವ ಭಾಗದಲ್ಲೂ ರಾಜರೆಂಬುವವರು ಇರಲಿಲ್ಲ. ಊರಿನ ಜನ ತಮ್ಮ ಊರನ್ನು ಆಳುವುದಕ್ಕೆ ಯೋಗ್ಯರಾದ ಮತ್ತು ನ್ಯಾಯಪರರಾದ ವ್ಯಕ್ತಿಗಳನ್ನೇ ಆರಿಸುತ್ತಿದ್ದರು. ಇಡೀ ನಗರದ ಯೋಗಕ್ಷೇಮ ಈ ನ್ಯಾಯನಿಷ್ಠರ ಹೊಣೆಯಾಗಿರುತ್ತಿತ್ತು.

ಒಮ್ಮೆ ಕಾರ್ಥೇಜಿನವರು ಸೈರಕ್ಯೂಸಿನವರ ಮೇಲೆ ದಂಡೆತ್ತಿ ಬಂದರು. ಆ ವಿಷಮ ಸಮಯದಲ್ಲಿ ಆಗ ಸಾಮಾನ್ಯ ಪ್ರಜೆಯಾಗಿದ್ದ ಡಯೊನೀಸಿಯಸ್, ತಾನು ದಂಡನಾಯಕನಾಗಿ ನಿಂತು, ಶತ್ರುಸೈನ್ಯವನ್ನು ಹೊಡೆದೋಡಿಸಿ, ತನ್ನ ಊರನ್ನು ಕಾಪಾಡಿದ. ಆ ಕೃತಜ್ಞತೆಯ ಕಾರಣವಾಗಿ, ಊರಿನ ಜನ ಅವನನ್ನು ತಮ್ಮ ನಾಯಕನನ್ನಾಗಿ ಆರಿಸಿಕೊಂಡರು. ಕಾಲಕ್ರಮೇಣ ಅವನು ಎಲ್ಲಾ ಅಧಿಕಾರವನ್ನೂ ತನ್ನ ವಶಪಡಿಸಿಕೊಂಡ. ಜನರೆಲ್ಲ ಅವನು ಹೇಳಿದ ಹಾಗೆ ಕೇಳಿಕೊಂಡು ಇರಬೇಕಾಯಿತು. ಅವನಿಗೆ ವಿರುದ್ಧವಾಗಿ ಮಾತನಾಡುವ ಧೈರ್ಯ ಯಾರಿಗೂ ಇರಲಿಲ್ಲ.

ಡಯೊನೀಸಿಯಸ್ ಮಂತ್ರಾಲೋಚನೆಯಲ್ಲಿ ಬುದ್ಧಿವಂತ ಮಾತ್ರವಲ್ಲ, ಯುದ್ಧಕರ್ಮದಲ್ಲಿ ಕುಶಲಿಯಷ್ಟೇ ಅಲ್ಲ, ಪ್ರಜಾಪಾಲನೆಯಲ್ಲೂ ದಕ್ಷನಾಗಿದ್ದ. ಆತನಿಗೆ ಸಾಹಿತ್ಯದಲ್ಲೂ ಅಭಿರುಚಿಯಿತ್ತು. ತನ್ನ ಸಭೆಯಲ್ಲಿ ಪಂಡಿತರಿಗೆ, ಬೇಕಾದ ಹಾಗೆ ಪ್ರೋತ್ಸಾಹ ಕೊಡುತ್ತಿದ್ದ. ಇಷ್ಟೆಲ್ಲ ಆದರೂ ಪ್ರಜೆಗಳಿಗೆ ತನ್ನ ಮೇಲೆ ಅಷ್ಟು ಪ್ರೀತಿ ಇಲ್ಲ ಎಂಬುದನ್ನು ಅವನು ಕಂಡುಕೊಂಡಿದ್ದ. ಆದ್ದರಿಂದ ಡಯೊನೀಸಿಯಸ್ ಬೇರೆಲ್ಲ ವಿಷಯಗಳಲ್ಲಿ ರಾಜನ ಹಾಗೆ ಇದ್ದರೂ, ಅವನ ಮನಸ್ಸಿಗೆ ಮಾತ್ರ ಸುಖ ಇರಲಿಲ್ಲ.

"ಯಾವ ಹೊತ್ತಿನಲ್ಲಿ ನನಗಿಂತ ಶಕ್ತನಾದವನು ತಲೆಯೆತ್ತಿಕೊಳ್ಳುತ್ತಾನೋ? ಅವನ ಜೊತೆಗೆ ಯಾರು ಯಾರು ನೆರವಾಗುತ್ತಾರೋ? ಹಣಕ್ಕಾಗಿ, ಹೆಸರಿಗಾಗಿ, ಅಧಿಕಾರಕ್ಕಾಗಿ ಎಲ್ಲರೂ ನನ್ನ ಸುತ್ತ ಮುತ್ತಿಕೊಂಡಿರುವರೇ ಹೊರತು, ನನಗಾಗಿ, ನನ್ನ ಜೊತೆಗೆ ನಿಲ್ಲುವವರು ಯಾರನ್ನೂ ನಾನು ಕಂಡರಿಯೆ" ಎಂದು ಒಳಗೊಳಗೇ ಡಯೊನೀಸಿಯಸ್ ಕೊರಗುತ್ತಿದ್ದ.

ಆ ಕೊರಗಿನಿಂದಲೇ ಅವನಿಗೆ ಸದಾ ದಿಗಿಲು. ಆ ದಿಗಿಲಿನಿಂದ ಅವನಿಗೆ ಯಾರನ್ನು ಕಂಡರೂ ಸಂದೇಹ. ಸಂದೇಹಕ್ಕೆ ಗುರಿಯಾದವರನ್ನು ಸೆರೆಹಿಡಿಸುತ್ತಿದ್ದ. ಸೆರೆಮನೆಗೆ ಗುಪ್ತದ್ವಾರದಿಂದ ಪ್ರವೇಶಮಾಡಿ, ಅಲ್ಲಿ ಅವರು ತನ್ನ ವಿಷಯವಾಗಿ ಏನು ಆಡಿಕೊಳ್ಳುವರೋ ಎಂದು ಕದ್ದು ಕೇಳುತ್ತಿದ್ದ.


ಚಿತ್ರ : ಶ್ರೀಕಾಂತ ಆಚಾರ್ಯ

ಸ್ವಾರ್ಥಕ್ಕಾಗಿ ಅವನ ಹತ್ತಿರ ಆಪ್ತರಂತೆ ಅಂಟಿಕೊಳ್ಳುತ್ತಿದ್ದವರಲ್ಲಿ ಡಮೋಕ್ಲಿಸ್ ಎಂಬವನೊಬ್ಬ. ಒಮ್ಮೆ ಇವನು ಡಯೊನೀಸಿಯಸ್ ಸಂಗಡ ಮಧುವನ್ನು ಕುಡಿಯುತ್ತಾ, "ಈ ರಾಜಪದವಿಯನ್ನು ಪಡೆದಿರುವ ನೀನು ಬಹು ಭಾಗ್ಯಶಾಲಿ" ಎಂದು ಹೊಗಳಿದ. ಅವನ ಹೊಗಳಿಕೆಯನ್ನು ಕರುಬು ಎಂದು ಡಯೊನೀಸಿಯಸ್ ತಪ್ಪು ತಿಳಿದ. "ಈ ಭಾಗ್ಯದ ರುಚಿ ಹೇಗಿರುತ್ತದೆ ಎನ್ನುವುದನ್ನು ಸ್ವಲ್ಪ ನೋಡುತ್ತೀಯಾ?" ಎಂದು ವ್ಯಂಗ್ಯವಾಗಿ ನಕ್ಕ.

ಆ ದಿವಸ ಡಮೋಕ್ಲಿಸ್ ಅನ್ನು ತನ್ನ ಸ್ಥಾನದಲ್ಲಿ ಕೂರಿಸಿದ. ತಾನು ಅನುಭವಿಸುತ್ತಿದ್ದ ಭೋಗಭಾಗ್ಯಗಳನ್ನೆಲ್ಲ ಅವನಿಗೆ ಒಪ್ಪಿಸಿದ. 'ಇದು ಹೀಗೇ ಶಾಶ್ವತವಾಗಿರಬಾರದೇ!' ಎಂದು ಡಮೋಕ್ಲಿಸ್ ಹಂಬಲಿಸಿದ. ಆಗ ಡಯೊನೀಸಿಯಸ್ ಒಂದು ಹರಿತವಾದ ಖಡ್ಗವನ್ನು ತರಿಸಿ, ಒಂದು ಕುದುರೆಯ ಕೂದಲಿನ ಎಳೆಯಿಂದ ಅದನ್ನು ಡಮೋಕ್ಲಿಸ್‌ನ ತಲೆಯ ಮೇಲೆ ನೇತು ಹಾಕಿಸಿದ!

ಭಾರವಾದ ಖಡ್ಗ! ಅದನ್ನು ಹಿಡಿದಿರುವುದು ಒಂದೇ ಒಂದು ಕುದುರೆಯ ಕೂದಲು. ಗಾಳಿ ಸ್ವಲ್ಪ ಅಲುಗಾಡಿದರೂ ಸಾಕು! ಎಲ್ಲಿ ಕೂದಲು ಕಡಿದುಕೊಂಡು ಕತ್ತಿ ತಲೆಯ ಮೇಲೆ ಬೀಳುವುದೋ! ಡಮೋಕ್ಲಿಸ್ ಇದ್ದಂತೆ ಅಲ್ಲ, ಸತ್ತಂತೆ ಅಲ್ಲ! ಅವನಿಗೆ ಮಾಂಸ ಸೇರದು, ಮದ್ಯ ಸೇರದು! ಅವನ ಪಾಡು ಅವನ ಶತ್ರುವಿಗೂ ಬೇಡ!

ಡಯೊನೀಸಿಯಸ್‌ನ ಕ್ರೂರದೃಷ್ಟಿಗೆ ಹೀಗೆ ಗುರಿಯಾದವರು ಎಷ್ಟು ಜನರೋ!

ಅವರಲ್ಲಿ ಅನೇಕರನ್ನು ಲೋಕ ಮರೆತಿದೆ. ಆದರೆ ಪಿಥಿಯಾಸ್ ಎಂಬುವನನ್ನು ಮಾತ್ರ ಲೋಕವು ಸೂರ್ಯ ಚಂದ್ರ ನಕ್ಷತ್ರಗಳಿರುವವರೆಗೂ